# ನೃಪತುಂಗನ ನೆಲದಲ್ಲಿ ಶಾಸ್ತ್ರೀಯ ಕನ್ನಡ ಅಧ್ಯಯನ ಆರಂಭ

## ಗುಲ್ಬರ್ಗ್‌ದಲ್ಲಿರುವ ಕರ್ನಾಟಕ ಕೇಂದ್ರೀಯ ವಿವಿಯಲ್ಲಿ ಅಧ್ಯಯನ ಕೇಂದ್ರ ಸ್ಥಾಪನೆ | ಭಾಷಾಶಾಸ್ತ್ರ, ಶಾಸ್ತ್ರಗ್ರಂಥ ಸೇರಿದಂತೆ 7 ರೂಪಗಳಲ್ಲಿ ಅಧ್ಯಯನ ನೀಲನಕಾಶೆ

■ ಶೇಷಮೂರ್ತಿ ಅವಧಾನಿ

**ಗುಲ್ಬರ್ಗ:** ಶಾಸ್ತ್ರೀಯ ಸ್ಥಾನಮಾನ ದೊರಕಿದ ನಂತರ ಕನ್ನಡ ಭಾಷೆಯ ವಿವಿಧ ಸ್ವರೂಪಗಳ ಅಧ್ಯಯನಕ್ಕೆ ಗುಲ್ಬರ್ಗ್‌ದಲ್ಲಿರುವ ಕರ್ನಾಟಕ ಕೇಂದ್ರೀಯ ವಿವಿಯಲ್ಲಿ ಸ್ಥಾಪನೆಯಾಗಿರುವ ಶಾಸ್ತ್ರೀಯ ಕನ್ನಡ ಕೇಂದ್ರದಲ್ಲೀಗ ಕೆಲಸ ಕಾರ್ಯಗಳು ಆರಂಭವಾಗಿವೆ.

ಕನ್ನಡದ ಮೊದಲ ಗ್ರಂಥ ಕವಿರಾಜಮಾರ್ಗ. ಈ ಕೃತಿಯಿಂದಾಗಿಯೇ ನೃಪತುಂಗ ಕನ್ನಡ ಸಾಹಿತ್ಯ ಲೋಕದಲ್ಲಿ ಮಿನುಗುತಾರೆ. ಈತ ಬಾಳಿ ಬದುಕಿದ ನೆಲ ಗುಲ್ಬರ್ಗ(ಸೇಡಂ ತಾಲೂಕಿನ ಮಾನ್ಯಖೇಟ, ಈಗಿನ ಮಳಖೇಡ) ಜಿಲ್ಲೆ. ಹೀಗಾಗಿ ನೃಪತುಂಗನ ನೆಲದಲ್ಲಿರುವ ಕೇಂದ್ರೀಯ ವಿವಿ ಅಂಗಳದಲ್ಲೇ ಶಾಸ್ತ್ರೀಯ ಕನ್ನಡ ಅಧ್ಯಯನಕ್ಕೆ ಮುಖ್ಯ ವೇದಿಕೆ ಸಜ್ಜುಗೊಂಡಿರುವುದು ವಿಶೇಷ.

CENTRAL UNIVERSITY OF KARNATAKA

ಕನ್ನಡ ಭಾಷಾ ಬೆಳವಣಿಗೆಯ ಹಲವು ಮಜಲುಗಳನ್ನು ಗುರುತಿಸಲಾಗಿದ್ದು ಶಾಸ್ತ್ರೀಯ ಭಾಷೆಯಾಗಿ ಕನ್ನಡ ಬೆಳೆದು ಬಂದ ದಾರಿ, ಅದು ಹೊಂದಿರುವ ಹಲವು ರೂಪ- ಸ್ವರೂಪಗಳ ಅಧ್ಯಯನಕ್ಕೆ ಈ ಕೇಂದ್ರದಲ್ಲೀಗ ನೀಲನಕಾಶೆಯೂ ತಯಾರಾಗಿದೆ.

ವಿವಿ ಧನ ಸಹಾಯ ಆಯೋಗ ಕನ್ನಡ ಭಾಷೆಯ ಈ ಕೇಂದ್ರವನ್ನು 5 ವರ್ಷಗಳ ಅವಧಿಗೆ ಗುಲ್ಬರ್ಗ ಕೇಂದ್ರೀಯ ವಿವಿಗೆ ನೀಡಿ ₹1.50 ಕೋಟಿ ಆರ್ಥಿಕ ನೆರವನ್ನೂ ಘೋಷಿಸಿದೆ. ಈ ಸಂಪನ್ಮೂಲ ಬಳಸಿಕೊಂಡೇ ಪ್ರೊ. ಬಿ.ಮಲ್ಲಿಕಾರ್ಜುನ(ನಿರ್ದೇಶಕರು) ಉಸ್ತುವಾರಿಯಲ್ಲಿ 8 ತಿಂಗಳ ಹಿಂದೆ ಶಾಸ್ತ್ರೀಯ ಕನ್ನಡ ಅಧ್ಯಯನ ಕೇಂದ್ರ ಸ್ಥಾಪನೆಯಾಗಿದೆ. ಭಾಷಾಶಾಸ್ತ್ರ, ಶಾಸ್ತ್ರಗ್ರಂಥಗಳು, ಶಾಸನಶಾಸ್ತ್ರ ಮತ್ತು ಹಸ್ತಪ್ರತಿಶಾಸ್ತ್ರ, ಶಾಸ್ತ್ರೀಯ ಸಾಹಿತ್ಯ, ತೌಲನಿಕ ಸಾಹಿತ್ಯ, ಕನ್ನಡ ಭಾಷೆ, ಕರ್ನಾಟಕದ ಇತಿಹಾಸ, ಧಾರ್ಮಿಕ ಅಧ್ಯಯನಗಳು, ಅನುವಾದ ಹೀಗೆ 7 ರೂಪಗಳಲ್ಲಿ ಮುಖ್ಯ ಅಧ್ಯಯನ ಕ್ಷೇತ್ರಗಳನ್ನು ಈ ಕೇಂದ್ರ ಗುರುತಿಸಿ ಮುಂದಿನ 5 ವರ್ಷಗಳ ಅವಧಿಗೆ ಸೃಜನಾತ್ಮಕ ಯೋಜನೆ ಹಾಕಿಕೊಂಡಿದೆ.

### ಯೋಜನೆಗಳು

- **ಮಾನವ ಸಂಪನ್ಮೂಲ–** ಛಂದಸ್ಸು, ಶಾಸನಶಾಸ್ತ್ರ, ಹಸ್ತಪ್ರತಿಶಾಸ್ತ್ರ, ಗ್ರಂಥ ಸಂಪಾದನೆ, ನಿಘಂಟು ಶಾಸ್ತ್ರ, ಭಾಷಾಶಾಸ್ತ್ರ, ಇತಿಹಾಸ ಮತ್ತು ಧಾರ್ಮಿಕ ಅಧ್ಯಯನ, ತೌಲನಿಕ ಸಾಹಿತ್ಯದಲ್ಲಿ ಅಲ್ಪಾವಧಿ ಕಾರ್ಯ ಶಿಬಿರಗಳ ಆಯೋಜನೆ. ಈ ವಿಷಯಗಳಲ್ಲಿ ವರ್ಷಕ್ಕೆ ಒಂದು ದೀರ್ಘಾವಧಿ ಶಿಬಿರ.
- **ಶಿಕ್ಷಣ ಸಂಪನ್ಮೂಲ–** ಶಾಸ್ತ್ರೀಯ ಕನ್ನಡದ ವಿವರಣಾತ್ಮಕ ವಾಚಿಕೆ, ಬೋಧನಾ ವಿಧಾನ ನಿರೂಪಕ, ಬೋಧನಾ ಕಲಿಕಾ ವ್ಯಾಕರಣ, ಐತಿಹಾಸಿಕ ವ್ಯಾಕರಣಗಳ ರಚನೆ.
- **ಸಂಶೋಧನಾ ಸಂಪನ್ಮೂಲ–** ಶಾಸ್ತ್ರೀಯ ಕನ್ನಡ ಶಾಸನಗಳ ದತ್ತಾಂಶ ಸಂಗ್ರಹ, ಶಾಸ್ತ್ರೀಯ ಗ್ರಂಥಗಳ ಪದವಿವರಣ ಕೋಶಗಳ ರಚನೆ, ಅಂತರ್ ಶಿಸ್ತೀಯ ಅಧ್ಯಯನ, ಭಾಷಾಭಿವೃದ್ಧಿ ಅಧ್ಯಯನ, ಪದ, ಭಾಷಾ ಸಂಪರ್ಕ ಅಧ್ಯಯನ, ಅನುವಾದ ಅಧ್ಯಯನ.

ಶಾಸ್ತ್ರೀಯ ಭಾಷಾ ಅಧ್ಯಯನ ಕೇಂದ್ರಗಳ ನಡುವೆ ಸಂಪರ್ಕ ಜಾಲ ಹುಟ್ಟು ಹಾಕುವ, ಮಾಹಿತಿ ಸಂವಹನಕ್ಕೆ ಯಾವುದೇ ಅಡಚಣೆ ಇಲ್ಲದಂತೆ ಅಗತ್ಯ ಕ್ರಮ ಕೈಗೊಳ್ಳುವ ಮೂಲಕ ಶಾಸ್ತ್ರೀಯ ಕನ್ನಡ ಅಧ್ಯಯನ ಹೆಚ್ಚು ಪರಿಣಾಮಕಾರಿಯಾಗುವಂತೆ ಮಾಡಲು ಕೇಂದ್ರದಲ್ಲಿ ಯೋಜನೆಗಳು ಸಿದ್ಧಗೊಂಡಿವೆ.



ಕನ್ನಡ ಭಾಷೆಯ ಅಧ್ಯಯನಕ್ಕೆ ಇಲ್ಲಿ ಹಲವು ಆಯಾಮಗಳನ್ನು ಗುರುತಿಸಿ ಯೋಜನೆ ರೂಪಿಸಲಾಗಿದೆ. ಛಂದಶಾಸ್ತ್ರ, ಅನುವಾದ, ಶಾಸನ ಶಾಸ್ತ್ರಗಳಿಗೆ ಹೆಚ್ಚಿನ ಒತ್ತು ನೀಡಲಾಗುತ್ತದೆ.

■ **ಪ್ರೊ. ಭ. ಮಲ್ಲಿಕಾರ್ಜುನ,**
ನಿರ್ದೇಶಕರು, ಶಾಸ್ತ್ರೀಯ ಕನ್ನಡ ಕೇಂದ್ರ,

### ಉದ್ದೇಶಗಳು

- ಅಧ್ಯಯನ ಶಿಬಿರ ನಡೆಸಿ ಮುಂದಿನ ತಲೆಮಾರಿನ ಸಂಶೋಧಕರ ಕಾರ್ಯಪಡೆ ಸಿದ್ಧಗೊಳಿಸುವುದು.
- ಶಾಸನ– ಗ್ರಂಥಗಳ ದತ್ತಾಂಶಗಳ ಸಂಗ್ರಹವನ್ನು ಅಭಿವೃದ್ಧಿಪಡಿಸುವುದು.
- ಮಾಹಿತಿ ತಂತ್ರಜ್ಞಾನ ಬಳಸಿ ಕನ್ನಡ ಬೋಧನೆ, ಕಲಿಕೆ ಸುಲಭಗೊಳಿಸುವುದು.
- ಕಾರ್ಯಶಿಬಿರ: ವಿಚಾರ ಸಂಕಿರಣ ನಡೆಸುವುದು.
- ಹಸ್ತಪ್ರತಿಗಳು, ಶಾಸನಗಳ ಅಧ್ಯಯನಕ್ಕೆ ಹೆಚ್ಚು ಒತ್ತು.
- ಅಪರೂಪದ ಬರಹಗಳ ಪ್ರಕಟಣೆ.
- ಪಿಎಚ್‌ಡಿ ಅಧ್ಯಯನಕ್ಕೆ ಅವಕಾಶ.
- ಮುಖ್ಯ ಅಧ್ಯಯನ ವಿಷಯವಾಗಿ ಚಿಂತಕರ ಚಾವಡಿಯಾಗಿ ಕಾರ್ಯ ನಿರ್ವಹಣೆ.